# ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯನಿರ್ಣಯ ಮಂಡಲಿ
**ಮಲ್ಲೇಶ್ವರಂ, ಬೆಂಗಳೂರು – 560 003**

**KARNATAKA SCHOOL EXAMINATION AND ASSESSMENT BOARD**
**Malleshwaram, Bengaluru – 560 003**

## 2023-24ರ ಎಸ್.ಎಸ್.ಎಲ್.ಸಿ. ಮಾದರಿ ಪ್ರಶ್ನೆಪತ್ರಿಕೆ
## S.S.L.C. MODEL QUESTION PAPER – 2023-24

# ವಿಷಯ : ಸಮಾಜ ವಿಜ್ಞಾನ
# Subject : SOCIAL SCIENCE

**(ಕನ್ನಡ ಮಾಧ್ಯಮ / Kannada Medium)**

ಸಮಯ : 3 ಗಂಟೆ 15 ನಿಮಿಷಗಳು ] **ವಿಷಯ ಸಂಕೇತ : 85-K**

ಗರಿಷ್ಠ ಅಂಕಗಳು : 80 ] **Subject Code : 85-K**

**CCE-RF : ಶಾಲಾ ವಿದ್ಯಾರ್ಥಿಗಳು / Regular Fresh**

---

***ಪರೀಕ್ಷಾರ್ಥಿಗಾಗಿ ಸಾಮಾನ್ಯ ಸೂಚನೆಗಳು :***

1. ಈ ಪ್ರಶ್ನೆಪತ್ರಿಕೆಯು ಒಟ್ಟು 38 ಪ್ರಶ್ನೆಗಳನ್ನು ಹೊಂದಿದೆ.
2. ಪ್ರಶ್ನೆಪತ್ರಿಕೆಯನ್ನು ಹಿಮ್ಮುಖ ಜಾಕೆಟ್ ಮೂಲಕ ಮೊಹರು (ಸೀಲ್) ಮಾಡಲಾಗಿದೆ. ಪರೀಕ್ಷೆ ಪ್ರಾರಂಭವಾಗುವ ಸಮಯಕ್ಕೆ ನಿಮ್ಮ ಪ್ರಶ್ನೆಪತ್ರಿಕೆಯ ಬಲಬದಿ ಪಾರ್ಶ್ವವನ್ನು ಕತ್ತರಿಸಿ, ಪ್ರಶ್ನೆಪತ್ರಿಕೆಯಲ್ಲಿ ಎಲ್ಲಾ ಪುಟಗಳು ಇವೆಯೇ ಎಂದು ಪರೀಕ್ಷಿಸಿಕೊಳ್ಳಿ.
3. ಪ್ರಶ್ನೆಗಳಿಗೆ ಕೊಟ್ಟಿರುವ ಸೂಚನೆಗಳನ್ನು ಪಾಲಿಸಿ.
4. ಬಲ ಭಾಗದಲ್ಲಿ ಕೊಟ್ಟಿರುವ ಅಂಕಿಗಳು ಪ್ರಶ್ನೆಗಳಿಗಿರುವ ಪೂರ್ಣ ಅಂಕಗಳನ್ನು ತೋರಿಸುತ್ತವೆ.
5. ಪ್ರಶ್ನೆಪತ್ರಿಕೆಯನ್ನು ಓದಿಕೊಳ್ಳಲು 15 ನಿಮಿಷಗಳ ಕಾಲಾವಕಾಶವೂ ಸೇರಿದಂತೆ, ಉತ್ತರಿಸಲು ನಿಗದಿಪಡಿಸಲಾದ ಸಮಯವನ್ನು ಪ್ರಶ್ನೆಪತ್ರಿಕೆಯ ಮೇಲ್ಭಾಗದಲ್ಲಿ ನೀಡಲಾಗಿದೆ.

[ Turn over

**I. ಈ ಪ್ರತಿಯೊಂದು ಪ್ರಶ್ನೆ ಅಥವಾ ಅಪೂರ್ಣ ಹೇಳಿಕೆಗೆ ನಾಲ್ಕು ಆಯ್ಕೆಗಳನ್ನು ನೀಡಲಾಗಿದೆ. ಅವುಗಳಲ್ಲಿ ಸೂಕ್ತವಾದ ಒಂದು ಉತ್ತರವನ್ನು ಆರಿಸಿ, ಅದರ ಕ್ರಮಾಕ್ಷರದೊಡನೆ ಪೂರ್ಣ ಉತ್ತರವನ್ನು ಬರೆಯಿರಿ : 8 × 1 = 8**

1. ಮೂರನೇ ಕಾರ್ನಾಟಿಕ್ ಯುದ್ಧವನ್ನು ಕೊನೆಗೊಳಿಸಿದ ಒಪ್ಪಂದ

   (A) ಪ್ಯಾರಿಸ್ ಒಪ್ಪಂದ

   (B) ಏಕ್ಸ್-ಲಾ ಚಾಪೆಲ್ ಒಪ್ಪಂದ

   (C) ಪಾಂಡಿಚೇರಿ ಒಪ್ಪಂದ

   (D) ಮದ್ರಾಸ್ ಒಪ್ಪಂದ

2. ಈಸ್ಟ್ ಇಂಡಿಯಾ ಕಂಪನಿಯಿಂದ ಬ್ರಿಟಿಷ್ ಸರ್ಕಾರ ಪಡೆಯುತ್ತಿದ್ದ ತೆರಿಗೆ ಹಣವನ್ನು ಎಡ್ಮಂಡ್ ಬರ್ಕ್ ಹೀಗೆಂದು ಟೀಕಿಸಿದ್ದು

   (A) ಪರೋಕ್ಷ ತೆರಿಗೆ

   (B) ಅಪರಾಧ ತೆರಿಗೆ

   (C) ನೇರ ತೆರಿಗೆ

   (D) ಕಂಪನಿ ತೆರಿಗೆ

3. ಹಸಿವೆಯಿಂದ ಜಾಗತಿಕ ಸಮುದಾಯವನ್ನು ವಿಮುಕ್ತಿಗೊಳಿಸುವ ಉದ್ದೇಶದಿಂದ ರಚನೆಗೊಂಡ ವಿಶ್ವಸಂಸ್ಥೆಯ ಸಂಘ ಸಂಸ್ಥೆ

(A) ವಿಶ್ವ ಆರೋಗ್ಯ ಸಂಸ್ಥೆ

(B) ಆಹಾರ ಮತ್ತು ಕೃಷಿ ಸಂಸ್ಥೆ

(C) ಅಂತಾರಾಷ್ಟ್ರೀಯ ಹಣಕಾಸು ಸಂಸ್ಥೆ

(D) ವಿಶ್ವ ವ್ಯಾಪಾರ ಸಂಘ

4. ನಮ್ಮ ಸಂವಿಧಾನದ 24ನೇ ವಿಧಿಯು ನಿಷೇಧಿಸುವುದು

(A) ಬಾಲ್ಯವಿವಾಹ

(B) ಹೆಣ್ಣು ಭ್ರೂಣ ಹತ್ಯೆ

(C) ಬಾಲಕಾರ್ಮಿಕತೆ

(D) ಹೆಣ್ಣು ಶಿಶು ಹತ್ಯೆ

5. ಮಹಾನದಿಯನ್ನು ಇಂದು ಒಡಿಶಾದ ಕಣ್ಣೀರಿನ ನದಿ ಎಂದು ಕರೆಯಲಾಗದು. ಕಾರಣ

(A) ಭಾಕ್ರಾ–ನಂಗಲ್ ಯೋಜನೆಯು ಪ್ರವಾಹವನ್ನು ನಿಯಂತ್ರಿಸಿದೆ

(B) ಡಿ.ವಿ.ಸಿ. ಯೋಜನೆಯು ಪ್ರವಾಹವನ್ನು ನಿಯಂತ್ರಿಸಿದೆ

(C) ಹಿರಾಕುಡ್ ಯೋಜನೆಯು ಪ್ರವಾಹವನ್ನು ನಿಯಂತ್ರಿಸಿದೆ

(D) ಕೋಸಿ ಯೋಜನೆಯು ಪ್ರವಾಹವನ್ನು ನಿಯಂತ್ರಿಸಿದೆ

6. ಪ್ರಸ್ತುತ ದಿನಗಳಲ್ಲಿ ಭಾರತದಿಂದ ಅಭ್ರಕದ ರಫ್ತು ಕಡಿಮೆಯಾಗುತ್ತಿದೆ. ಏಕೆಂದರೆ,

(A) ಅಭ್ರಕದ ಬದಲಿ ವಸ್ತುಗಳು ದೊರೆಯುತ್ತಿವೆ

(B) ರಫ್ತು ಸುಂಕ ಅಧಿಕವಾಗಿದೆ

(C) ಅಭ್ರಕದ ನಿಕ್ಷೇಪ ಕಡಿಮೆಯಾಗಿದೆ

(D) ಉತ್ಪಾದನಾ ವೆಚ್ಚ ಅಧಿಕವಾಗಿದೆ

7. ಇಂದಿರಾ ಆವಾಸ್ ಯೋಜನೆಯ ಪ್ರಮುಖ ಉದ್ದೇಶ

(A) ಉದ್ಯೋಗ ಒದಗಿಸುವುದು

(B) ವಸತಿ ನಿರ್ಮಿಸಿಕೊಡುವುದು

(C) ಸಾರ್ವಜನಿಕ ಪಡಿತರ ವ್ಯವಸ್ಥೆಯನ್ನು ಬಲಪಡಿಸುವುದು

(D) ಸಾಕ್ಷರತೆಯನ್ನು ಹೆಚ್ಚಿಸುವುದು

8. ಭಾನು ಎಂಬುವವರು ಭವಿಷ್ಯದಲ್ಲಿ ತನ್ನ ಮಗಳ ಮದುವೆಗಾಗಿ ಇಂದಿನಿಂದ ಹಣ ಉಳಿತಾಯ ಮಾಡಲು ಸೂಕ್ತವಾದ ಬ್ಯಾಂಕ್ ಖಾತೆ

(A) ಉಳಿತಾಯ ಖಾತೆ

(B) ನಿಶ್ಚಿತ ಠೇವಣಿ ಖಾತೆ

(C) ಚಾಲ್ತಿ ಖಾತೆ

(D) ಆವರ್ತ ಠೇವಣಿ ಖಾತೆ

**II. ಈ ಪ್ರತಿಯೊಂದು ಪ್ರಶ್ನೆಗೂ ಒಂದೊಂದು ವಾಕ್ಯದಲ್ಲಿ ಉತ್ತರ ಬರೆಯಿರಿ : 8 × 1 = 8**

9. ಸಹಾಯಕ ಸೈನ್ಯ ಪದ್ಧತಿಯನ್ನು ಜಾರಿಗೆ ತಂದವರು ಯಾರು ?

10. ರಾಜಾ ರಾಮ್‌ಮೋಹನ್ ರಾಯರು ಪ್ರಾರಂಭಿಸಿದ ಪತ್ರಿಕೆ ಯಾವುದು ?

11. ನಿಶ್ಶಸ್ತ್ರೀಕರಣವು ಪ್ರಚಲಿತ ಜಗತ್ತಿನ ಅವಶ್ಯಕತೆಯಾಗಿದೆ. ಏಕೆ ?

12. ಪೂರ್ವಾಗ್ರಹ ಎಂದರೇನು ?

13. ಕೂಲಿರಹಿತ ಕೆಲಸಗಾರರಿಗೆ ಒಂದು ಉದಾಹರಣೆ ಕೊಡಿ.

14. ಉತ್ತರ ಭಾರತದ ಮೈದಾನವನ್ನು ಸಂಚಯನ ಮೈದಾನ ಎಂದು ಏಕೆ ಕರೆಯುತ್ತಾರೆ ?

15. ಸುವರ್ಣ ಗ್ರಾಮೋದಯ ಯೋಜನೆಯ ಮುಖ್ಯ ಉದ್ದೇಶವೇನು ?

16. ಹರೀಶನು 50,000 ರೂಪಾಯಿಯ ಒಂದು ಹೊಸ ಲ್ಯಾಪ್‌ಟಾಪ್ ಕೊಳ್ಳುತ್ತಾನೆ. ಆದರೆ ಅದು ಒಂದು ವಾರದಲ್ಲಿ ಕೆಟ್ಟುಹೋಗುತ್ತದೆ. ಆತನ ಅಹವಾಲನ್ನು ಲ್ಯಾಪ್‌ಟಾಪ್ ಕಂಪನಿಯವರು ಮನ್ನಿಸಲಿಲ್ಲ. ಹರೀಶನು ಯಾವ ಗ್ರಾಹಕ ವೇದಿಕೆಗೆ ದೂರು ಸಲ್ಲಿಸಬೇಕು ?

**III. ಈ ಪ್ರತಿಯೊಂದು ಪ್ರಶ್ನೆಗೂ ಎರಡರಿಂದ ನಾಲ್ಕು ವಾಕ್ಯಗಳಲ್ಲಿ ಅಥವಾ ಅಂಶಗಳಲ್ಲಿ ಉತ್ತರಿಸಿ : 8 × 2 = 16**

17. ಮಹಿಳಾ ಸ್ವ-ಸಹಾಯ ಸಮೂಹಗಳ ಪ್ರಾಮುಖ್ಯತೆಯನ್ನು ವಿವರಿಸಿ.

**ಅಥವಾ**

'ಭಾರತದಲ್ಲಿ ವರದಕ್ಷಿಣೆ ನಿಷೇಧವು ಅತ್ಯಂತ ಅವಶ್ಯಕವಾಗಿದೆ.' ಏಕೆ ?

18. ಮಾನವ ಹಕ್ಕುಗಳ ಪ್ರತಿಪಾದನೆಗಾಗಿ ಭಾರತವು ಹೇಗೆ ಹೋರಾಡುತ್ತಿದೆ ?

**ಅಥವಾ**

'ವಿಶ್ವ ಆರೋಗ್ಯ ಕಾಪಾಡುವಲ್ಲಿ ವಿಶ್ವ ಆರೋಗ್ಯ ಸಂಸ್ಥೆಯ ಪಾತ್ರ ಮಹತ್ವದ್ದಾಗಿದೆ.' ಹೇಗೆ ?

19. ಆ್ಯನಿ ಬೆಸೆಂಟ್‌ರು ಭಾರತದ ಇತಿಹಾಸದಲ್ಲಿ ಚಿರಸ್ಮರಣೀಯರಾಗಿದ್ದಾರೆ. ಏಕೆ ?

20. ಸಂಪತ್ತಿನ ಸೋರಿಕೆ ಸಿದ್ಧಾಂತವನ್ನು ವಿವರಿಸಿ.

21. ಭಾರತದ ವ್ಯವಸಾಯವು 'ಮಾನ್ಸೂನ್ ಮಾರುತಗಳೊಡನೆ ಆಡುವ ಜೂಜಾಟ'ವಾಗಿದೆ. ಹೇಗೆ ?

22. ಭತ್ತ ಬೆಳೆಯಲು ಬೇಕಾಗುವ ಭೌಗೋಳಿಕ ಅಂಶಗಳನ್ನು ವಿವರಿಸಿ.

23. ಸಾರ್ವಜನಿಕ ಹಣಕಾಸು, ವೈಯಕ್ತಿಕ ಹಣಕಾಸಿಗಿಂತ ಭಿನ್ನವಾಗಿದೆ ಎಂಬುದನ್ನು ಸಮರ್ಥಿಸಿ.

24. ಗ್ರಾಹಕ ನ್ಯಾಯಾಲಯಕ್ಕೆ ಸಲ್ಲಿಸುವ ದೂರಿನಲ್ಲಿರಬೇಕಾದ ಅಂಶಗಳನ್ನು ವಿವರಿಸಿ.

**IV. ಈ ಪ್ರತಿಯೊಂದು ಪ್ರಶ್ನೆಗೂ ಆರು ವಾಕ್ಯಗಳಲ್ಲಿ ಅಥವಾ ಅಂಶಗಳಲ್ಲಿ ಉತ್ತರಿಸಿ :**

**$9 \times 3 = 27$**

25. ಮಾರ್ತಾಂಡ ವರ್ಮನು ಡಚ್ಚರ ಅಧಿಕಾರವನ್ನು ಹೇಗೆ ನಿಯಂತ್ರಿಸಿದನು ? ವಿವರಿಸಿ.

**ಅಥವಾ**

ಮೊದಲನೇ ಮಹಾಯುದ್ಧದ ಪರಿಣಾಮಗಳನ್ನು ವಿವರಿಸಿ.

26. ಭಾರತದಲ್ಲಿನ ಅರಣ್ಯಗಳ ಸಂರಕ್ಷಣಾ ವಿಧಾನಗಳನ್ನು ಪಟ್ಟಿ ಮಾಡಿ.

**ಅಥವಾ**

ಕೈಗಾರಿಕೆಗಳ ಸ್ಥಾನೀಕರಣದ ಮೇಲೆ ಪ್ರಭಾವ ಬೀರುವ ಅಂಶಗಳನ್ನು ಪಟ್ಟಿಮಾಡಿ.

27. ಹಸಿರು ಕ್ರಾಂತಿಗೆ ಪ್ರೇರಕವಾದ ಅಂಶಗಳನ್ನು ವಿವರಿಸಿ.

**ಅಥವಾ**

ಗ್ರಾಮೀಣಾಭಿವೃದ್ಧಿಯಲ್ಲಿ ಪಂಚಾಯತ್‌ರಾಜ್ ಸಂಸ್ಥೆಗಳ ಪಾತ್ರವನ್ನು ವಿವರಿಸಿ.

28. ಅಂಚೆ ಕಛೇರಿಗಳು ಸಾರ್ವಜನಿಕರಿಗೆ ಹಲವಾರು ಸೇವೆಗಳನ್ನು ಸಲ್ಲಿಸುತ್ತವೆ, ವಿವರಿಸಿ.

**ಅಥವಾ**

ಉದ್ಯಮಶೀಲತೆಯ ಗುಣಲಕ್ಷಣಗಳನ್ನು ವಿವರಿಸಿ.

29. ನಾಲ್ವಡಿ ಕೃಷ್ಣರಾಜ ಒಡೆಯರ್‌ರವರ ಸಾಧನೆಗಳನ್ನು ವಿವರಿಸಿ.

30. ಭಾರತವು ಸ್ವಾತಂತ್ರ್ಯ ಗಳಿಸಿದ ನಂತರ ಎದುರಿಸಿದ ಸಮಸ್ಯೆಗಳಾವವು ?

31. ಇತ್ತೀಚಿನ ದಿನಗಳಲ್ಲಿ ಚೀನಾದೊಂದಿಗೆ ಭಾರತದ ಬಾಂಧವ್ಯ ಹದಗೆಟ್ಟಿದೆ. ಏಕೆ ?

32. 'ಹಿಮಾಲಯ ಪರ್ವತಗಳು ನಮಗೆ ಉಪಯುಕ್ತವಾಗಿವೆ.' ವಿವರಿಸಿ.

33. 'ನಿರುದ್ಯೋಗ ಸಮಸ್ಯೆಯು ಅತ್ಯಂತ ಗಂಭೀರ ಸಾಮಾಜಿಕ ಸಮಸ್ಯೆಯಾಗಿದೆ.' ಸಮರ್ಥಿಸಿ.

**V. ಈ ಪ್ರತಿಯೊಂದು ಪ್ರಶ್ನೆಗೂ ಎಂಟು ವಾಕ್ಯಗಳಲ್ಲಿ ಅಥವಾ ಅಂಶಗಳಲ್ಲಿ ಉತ್ತರಿಸಿ :**

**4 × 4 = 16**

34. 'ಭಾರತೀಯ ಸ್ವಾತಂತ್ರ್ಯ ಹೋರಾಟದಲ್ಲಿ ಸುಭಾಷ್‌ಚಂದ್ರ ಬೋಸರ ಪಾತ್ರವು ಒಂದು ಮೈಲಿಗಲ್ಲು' ದೃಢೀಕರಿಸಿ.

**ಅಥವಾ**

ಬ್ರಿಟಿಷ್ ಶಿಕ್ಷಣವು ಭಾರತದಲ್ಲಿ ಪ್ರಗತಿಪರ ಧೋರಣೆಗಳುಳ್ಳ ಹೊಸ ತಲೆಮಾರುಗಳನ್ನು ಸೃಷ್ಟಿಸಿತು. ಸಮರ್ಥಿಸಿ.

35. 1857 ರ ದಂಗೆಯ ವಿಫಲತೆಗೆ ಕಾರಣಗಳನ್ನು ವಿವರಿಸಿ.

36. ಮಹಿಳೆಯರ ಸ್ಥಾನಮಾನವನ್ನು ಹೇಗೆ ಉತ್ತಮಪಡಿಸಬಹುದು ?

37. "ಚಂಡಮಾರುತಗಳು ವಿನಾಶಕಾರಕಗಳಾಗಿವೆ." ಈ ಹೇಳಿಕೆಯನ್ನು ಸಮರ್ಥಿಸಿ.

**VI.** 38. **ಭಾರತದ ನಕ್ಷೆಯನ್ನು ಬರೆದು, ಅದರಲ್ಲಿ ಈ ಕೆಳಗಿನವುಗಳನ್ನು ಗುರುತಿಸಿ :** **1 + 4 = 5**

a) ಗೋವಿಂದ ಸಾಗರ

b) ಬಾಂಬೆ ಹೈ

c) $82\frac{1}{2}^{\circ}$ ಪೂರ್ವ ರೇಖಾಂಶ

d) ಇಂದಿರಾ ಪಾಯಿಂಟ್

***ದೃಷ್ಟಿ ವಿಕಲಚೇತನ ವಿದ್ಯಾರ್ಥಿಗಳಿಗೆ ಪರ್ಯಾಯ ಪ್ರಶ್ನೆ : (ಪ್ರಶ್ನೆ ಸಂಖ್ಯೆ 38 ರ ಬದಲಿಗೆ)***

ವಿವಿಧೋದ್ದೇಶ ನದಿ ಕಣಿವೆ ಯೋಜನೆಗಳ ಮುಖ್ಯ ಉದ್ದೇಶಗಳನ್ನು ತಿಳಿಸಿ. **5**

DO NOT WRITE ANYTHING HERE